# ಇವನ ಹಿಡಕೊಂಡು ಹೋಗೆಲೊ ಜೋಗಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 77.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 252.
3. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 39.
4. **Note:** Lyrics in Ref. 1 is mentioned without highlights. The wordings in Ref. 2 are similar to Ref. 1 except few differences which are not considered here. The lyrics in Ref. 3 slightly different and given in yellow highlights.
5. **Note:** Singer has followed lyrics as in Ref. 1.
6. **Note:** The Ankita is different in these references. We have considered book in Ref.3 as standard and taken that Ankita for listing.

| | |
|---|---|
| ರಾಗ: ನಾದನಾಮಕ್ರಿಯೆ ತಾಳ: ಆದಿ | ರಾಗ: ಆನಂದ ಭೈರವಿ ತಾಳ: ಆದಿ |
| | |
| ಇವನ ಹಿಡಕೊಂಡು ಹೋಗೆಲೊ ಜೋಗಿ ॥ ಪ ॥ | ಇವನ ಹಿಡಿದುಕೊಂಡು ಹೋಗೆಲೊ ಜೋಗಿ |
| ಇವ ನಮ್ಮ ಮಾತ ಕೇಳದೆ ಪುಂಡನಾದ ॥ ಅಪ ॥ | ಇವ ನಮ್ಮ ಮಾತು ಕೇಳದೆ ಪುಂಡನಾದನು |
| | |
| ಆಡುತಾಡುತ ಪೋಗಿ ನೀರಲ್ಲಿ ಮುಳುಗಿದ | ಆಡುತಾಡುತ ಬಂದು ಮಾಡುವಿನೊಳ್ ಮುಳುಗಿದ |
| ಬೇಡವೆಂದರೆ ಬೆಟ್ಟ ಬೆನ್ನಲ್ಲಿ ಹೊತ್ತ | ಬೇಡವೆಂದರೆ ಬೆಟ್ಟ ಬೆನ್ನಲಿ ನೆಗಹಿದ |
| ದಾಡೆಯ ಮೇಲೆ ತಾ ಧಾರಿಣಿ ನೆಗಹಿದ | ಓಡುತೋಡುತ ಬಂದು ದಾಡೆಯಿಂದ ಸೀಳ್ವ |
| ನೋಡಿದವರಿಗೆ ಬಾಯ ತೆರೆದಂಜಿಸಿದ ॥ ೧ ॥ | ನೋಡಹೋದರೆ ಕಣ್ಣ ತೆರೆದಂಜಿಸುವ |
| | |
| ಹುಲ್ಲಲಿ ವಿಪ್ರನ ಕಣ್ಣು ತಿವಿದ ಬುದ್ಧಿ | ಹಲ್ಲಲಿ ಬ್ರಾಹ್ಮಣನ ಕಣ್ಣು ಕುಕ್ಕಿದ, ಬುದ್ಧಿ |
| ಇಲ್ಲೆಂದರೆ ಕೈಲಿ ಕೊಡಲಿಯ ಪಿಡಿದ | ಅಲ್ಲವೆಂದರೆ ಕೊಡಲಿಯ ಪಿಡಿದೆತ್ತಿದ |
| ಬಿಲ್ಲು ಪಿಡಿದು ತಾನು ರಕ್ಷಸರ ಕೊಂದ, ಬಹು | ಬಿಲ್ಲನು ಎಡದ ಕೈಯಿಂದಲಿ ಎತ್ತಿದ |
| ಬಲ್ಲಿದ ಮಾವನ ಶಿರವ ಛೇದಿಸಿದ ॥ ೨ ॥ | ಬಲ್ಲಿದ ಮಾವನ ಶಿರವನರಿದು ಬಂದ |
| | |
| ಬತ್ತಲೆ ಕುದುರೆಯ ಹತ್ತಬೇಡೆಂದರೆ | ಬತ್ತಲೆ ಕುದುರೆಯ ಹತ್ತಬೇಡೆಂದರೆ |
| ಹತ್ತಿದನು ಈತನು ಚಂದದಿಂದ | ಹತ್ತುವ ಶ್ರೀ ಕೃಷ್ಣ ಚಂದದಿಂದ |
| ಭಕ್ತವತ್ಸಲ ಶ್ರೀ ಪುರಂದರ ವಿಠಲನ | ಭಕ್ತವತ್ಸಲ ನಮ್ಮ ಪುರಂದರ ವಿಠ್ಠಲನ |
| ಎತ್ತಲಾದರೂ ಕೊಂಡು ಹೋಗೆಲೊ ಜೋಗಿ ॥ ೩ ॥ | ಅತ್ತ ಹಿಡಿದುಕೊಂಡು ಹೋಗಯ್ಯ ಜೋಗಿ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಹುಡುಗ ಕೃಷ್ಣನನ್ನು ಬೆದರಿಸಬೇಕೆಂದು ತಾಯಿ ಹೇಳಿದಂತೆ ಇರುವ ಪದ ಇದು. 'ಯಾರ ಮಾತನ್ನೂ ಕೇಳುವವನಲ್ಲ' ಎಂದರೆ ಸರ್ವಸ್ವತಂತ್ರನಾದವನು. ಯೋಗಿಯು ಅವನನ್ನು ತನ್ನ ಸಾಧನೆಯಿಂದ ಹಿಡಿದುಕೊಂಡು ತನ್ನ ಹೃದಯದಲ್ಲಿ ಕೂಡಿಹಾಕಬಹುದು; ಉಳಿದಂತೆ ಅವನು ಯಾರಿಗೂ ಯಾವ ಉಪಾಯಕ್ಕೂ ಸಿಕ್ಕುವವನಲ್ಲ.

**ಆಡುತಾಡುತ ...... ಮುಳುಗಿದ** = ಮತ್ಸ್ಯಾವತಾರ

**ಬೇಡವೆಂದರೆ ...... ನೆಗಹಿದ** = ಕೂರ್ಮಾವತಾರ

**ನೆಗಹು** = ನೆಗಪು ನಿಲ್ಲುವಿಕೆ, ಎತ್ತು, ಚಿಮ್ಮು

**ಧಾರಿಣಿ** = ಭೂಮಿ

**ಒಡುತೋಡುತ ...... ಸೀಳ್ವ** = ವರಾಹಾವತಾರ

**ನೋಡ ...... ಅಂಜಿಸುವ** = ನರಸಿಂಹಾವತಾರ

**ಹುಲ್ಲಲಿ ವಿಪ್ರನ ಕಣ್ಣ ತಿವಿದ** – ವಾಮನಾವತಾರದಲ್ಲಿ ವಿಷ್ಣುವಿನ ಕುಟಿಲವನ್ನರಿತ ಶುಕ್ರಾಚಾರ್ಯರು (ಬಲಿಚಕ್ರವರ್ತಿಯ ಗುರು) ಬಲಿಯು ಧಾರೆಗಾಗಿ ಗಿಂಡಿಯನ್ನು ಎತ್ತಿಕೊಳ್ಳಲು ಅದರಿಂದ ನೀರು ಬೀಳದಂತೆ ಮಾಯದಿಂದ ಗಿಂಡಿಯ ಮೂತಿಯನ್ನು ಸೂಕ್ಷ್ಮರೂಪದಿಂದ ಅಡ್ಡಗಟ್ಟಿದರು. ನೀರು ವಾಮನನ ಕೈಯೊಳಗೆ ಬೀಳದಿರಲು ವಾಮನನು ತನ್ನ ಬೆರಳಲ್ಲಿದ್ದ ದರ್ಭೆಯುಂಗುರದ ಕೊನೆಯಿಂದ ಗಿಂಡಿಯ ಮೂತಿಯೊಳಗೆ ಚುಚ್ಚಿದನು. ಆಗ ಅದು ಶುಕ್ರಾಚಾರ್ಯರ ಕಣ್ಣಿಗೆ ತಗುಲಿ ಒಂದು ಕಣ್ಣು ಕುರುಡಾಯಿತು.

**ಅಲ್ಲವೆಂದರೆ** – ವಿರೋಧಿಸಿದವರನ್ನು.

**ಬಲ್ಲಿದ ಮಾವನ** – ರಾಜನಾಗಿದ್ದ ಕಂಸನನ್ನು.

**ಬುದ್ದಿ ...... ಎತ್ತಿದ** = ಪರಶುರಾಮಾವತಾರ

**ಬಿಲ್ಲನು ...... ಎತ್ತಿದ** = ರಾಮಾವತಾರ

**ಬಲ್ಲಿದ ...... ಬಂದ** = ಕೃಷ್ಣಾವತಾರ

**ಬತ್ತಲೆ** = ಬೌದ್ಧಾವತಾರ

**ಕುದುರೆಯ ...... ಹತ್ತುವ =** ಕಲ್ಕ್ಯವತಾರ

**Classification:** Keerthane
**Ankita:** purandara vittala
**Location:** NA
**Category:** Krishna Leele, Dashavatara
**Sub-Category:** jogi, Krishna, dashavatara, niru, ATa, parvata, bhumi, bayi, kai, kannu, brahmana, asura, kudure, buddi, billu,
**Pravachana:** NA
**Explanation:** NA